ಕ್ರಿ.ಮಿಸ್. ನಂ.127/2023
ಪಿ.ಡಬ್ಲ್ಯೂ ಃ 1

**ದಿನಾಂಕಃ 28.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ.ಎ.ಎಸ್ ವಕೀಲರಿಂದಃ**

ನನ್ನ ಮದುವೆ ಸಮಯದಲ್ಲಿ ನನ್ನ ತಂದೆಯವರು ಇರಲಿಲ್ಲ. ನನ್ನ ತಂದೆ ಹೊಲ ಮನೆ ಕೆಲಸ ಮಾಡುತ್ತಿದ್ದರು. ನನ್ನ ಮೊದಲ ಮಗನನ್ನು ಗರ್ಭವತಿಯಾದ ಸಮಯದಲ್ಲಿ ತಾಳಿಕೋಟಿಯ ಭಟಬಾವಿ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ಆಗ ಆಸ್ಪತ್ರೆಗೆ ನಾನು ನನ್ನ ತಾಯಿ ಮತ್ತು ನನ್ನ ಗಂಡ ಹೋಗುತ್ತಿದ್ದೇವು. ನಾನು ಇಬ್ಬರು ಅಕ್ಕ-ತಂಗಿಯರು ಇರುತ್ತೇವೆ. ನನ್ನ ಅಕ್ಕನನ್ನು ಸಿಂದಗಿ ತಲೂಕಿನ ಕಬಸೊಳೆ ಗ್ರಾಮಕ್ಕೆ ಕೊಟ್ಟಿರುತ್ತೇವೆ. ಸದರಿ ನನ್ನ ಅಕ್ಕನಂದು ಅವರ ಗಂಡನ ಮೇಲೆ ಸಿಂದಗಿ ನ್ಯಾಯಾಲಯದಲ್ಲಿ ಪ್ರಕರಣ ಇದೆ ಎಂದರೆ ಸರಿಯಲ್ಲ.

2. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಪಹಣಿಯಲ್ಲಿ ರೂ.10 ಲಕ್ಷ ಸಾಲ ಇದೆ ಅಂತಾ ನಮೂದು ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಮತ್ತು ಎದುರುದಾರನ ಮದುವೆ ಗೋನಾಳ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ. ನಮ್ಮ ಮದುವೆಗೆ ಸುಮಾರು 10 ಕ್ರೂಷರ್ ಜನ ಬಂದಿದ್ದರು. ಮದುವೆ ಮಾಡುವ ಖರ್ಚನ್ನು ಎದುರುದಾರರ ಮನಯವರೆ ಕೊಟ್ಟಿರುತ್ತಾರೆ ಎಂದರೆ ಕ್ರೂಷರ ವಾಹನಗಳ ಖರ್ಚನ್ನು ನಮ್ಮ ತವರು ಮನೆಯವರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈಗ ನಾನು ಹೊಲ ಮನಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ಎದುರುದಾರನಿಗೆ ರೂ.10 ಲಕ್ಷ ರೂಪಾಯಿ ಸಾಲ ಇರುವುದರಿಂದ ನಮಗೆ ಕೋರಿಕೆಯ ಹಣವನ್ನು ಕೊಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಎದುರುದಾರನಿಗೆ ಯಾವುದೇ ಕೆಟ್ಟ ಚಟಗಳು ಇರುವುದಿಲ್ಲ

ಆದರೂ ನಾನು ಸುಳ್ಳ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎದುರೂದರನು ದಿನಕ್ಕೆ ರೂ.200 ದುಡಿಯುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಯಸ್ಸಾದ ತಾಯಿಯನ್ನು ಆತನೇ ನೋಡಿಕೊಳ್ಳುತ್ತಾನೆ ಎಂದರೆ ಸರಿಯಲ್ಲ. ಎದುರುದಾರನ ಹಿಸ್ಸೆಗೆ 2 ಎಕರೆ ಬರುತ್ತಿದ್ದು, ಆತನ ಹಿಸ್ಸೆಯಲ್ಲಿ 1 ಎಕರೆ ಮಗನಿಗೆ ಕೊಟ್ಟರೇ ಇನ್ನೂ 1 ಎಕರೆ ಎದುರುದಾರನಿಗೆ ಉಳಿಯುತ್ತದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪೂರ.